# ‘ಗೂಗಲ್ ಚಾಟ್’ ನಿಮಗೆಷ್ಟು ಗೊತ್ತು?

■ ಶಶಿಕುಮಾರ್ ಸಿ.

ಬಳಕೆದಾರರ ಡಾರ್ಲಿಂಗ್ ‘ಗೂಗಲ್’ ಈಚೆಗೆ ಗೂಗಲ್ ಚಾಟ್ ಅನ್ನು ಪರಿಚಯಿಸಿದೆ. ಇದು ಗೂಗಲ್ ಹ್ಯಾಂಗ್‌ಔಟ್‌ನ ಪ್ರತಿರೂಪವಾಗಿದೆ. ರಿಯಲ್ ಟೈಂ ಚಾಟಿಂಗ್‌ನ ಹೊಸ ಅನುಭವಕ್ಕೆ ಬಳಕೆದಾರರು ಉತ್ತಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಜಿಮೇಲ್ ಖಾತೆಯೊಂದಿಗೆ ಇದು ಮರ್ಜ್ ಆಗಲಿದ್ದು, ಗೂಗಲ್ ಖಾತೆಯೊಂದಿಗೆ ವ್ಯವಹರಿಸುವ ಪ್ರತಿನಡೆಯಲ್ಲೂ ಇದನ್ನು ಬಳಸಬಹುದು. ಕಾರ್ಪೊರೇಟ್ ಕೆಲಸಗಾರರಿಗೆ ಇದು ಅತ್ಯಂತ ಸಹಾಯಕ.

ಸ್ನೇಹಿತರು ಮತ್ತು ಸ್ನೇಹಿತರ ಗುಂಪುಗಳೊಂದಿಗೆ ಅನೌಪಚಾರಿಕ ಅಥವಾ ಔಪಚಾರಿಕ ಚರ್ಚೆಗಳಿಗೆ ಈ ಗೂಗಲ್ ಚಾಟ್ ಸಹಾಯಕ. ಗ್ರೂಪ್ ಮಾದರಿಯಂತಿರುವ ರೂಮ್ ರೀತಿಯಲ್ಲೂ ಇದನ್ನು ಬಳಸಬಹುದು. ಔಪಚಾರಿಕ ಚಾಟ್ ಅನ್ನು ‘ಗೂಗಲ್ ರೂಮ್ಸ್’ ಮೂಲಕ ಮಾಡಲಾಗುತ್ತದೆ.

ಗೂಗಲ್ ಪ್ರಕಾರ, ಚಾಟ್ ಕೇವಲ ಇಬ್ಬರು ಅಥವಾ ಹೆಚ್ಚಿನ ಜನರಿಗೆ ಯಾವುದೇ ಅನೌಪಚಾರಿಕ ಚಾಟ್ ಮಾಡುವ ಒಂದು ಮಾರ್ಗವಾಗಿದೆ. ದೀರ್ಘಕಾಲೀನ ಸಂಭಾಷಣೆಗಾಗಿ ಗೂಗಲ್ ರೂಮ್ಸ್ ಕ್ರಿಯೆಟ್ ಮಾಡಬಹುದು. ಇದರಲ್ಲಿ ಪ್ರತಿಯೊಂದು ರೂಮ್‌ಗೂ ಪ್ರತ್ಯೇಕ ಹೆಸರನ್ನು ಇಡಬಹುದು. ಜನರು ಹೊರಹೋಗಲು ಮತ್ತು ಮತ್ತೆ ಸೇರುವ ಅವಕಾಶವಿದೆ.

ಅಧಿಸೂಚನೆಗಳನ್ನು ಸ್ವಯಂಚಾಲಿತವಾಗಿ ರವಾನಿಸಬಹುದು ಮತ್ತು ಫೈಲ್‌ಗಳನ್ನು ಹಂಚಿಕೊಳ್ಳಬಹುದು. ಇದರಲ್ಲಿ ಕೆಲಸದ ಯೋಜನೆಗಳು, ವಾರಗಳು ಅಥವಾ ಹೆಚ್ಚಿನ ಅವಧಿಯಲ್ಲಿ ಸಂಭಾಷಣೆಯನ್ನು ಮುಂದುವರಿಸಲು ನೀವು ರೂಮ್ಸ್ ಅನ್ನು ಕ್ರಿಯೆಟ್ ಮಾಡಬಹುದು.

### ಆಕ್ಟಿವೇಟ್ ಮಾಡುವುದು ಹೇಗೆ?

- ಗೂಗಲ್ ಖಾತೆಯನ ಮೇಲಿನ ಎಡ ಮೂಲೆಯಲ್ಲಿ ಮೂರು ಸಾಲಿನ ಐಕಾನ್ ಇರುತ್ತದೆ. ಅದನ್ನು ಟ್ಯಾಪ್ ಮಾಡಿ. ಕೆಳಗೆ ಸ್ಕ್ರಾಲ್ ಮಾಡಿ ಮತ್ತು ಸೆಟ್ಟಿಂಗ್ಸ್ ಆಯ್ಕೆಯನ್ನು ಕ್ಲಿಕ್ ಮಾಡಿ. ಕಾಣುವ ಖಾತೆಗಳಲ್ಲಿ ನಿಮ್ಮ ಖಾತೆಯನ್ನು ಆಯ್ಕೆಮಾಡಿ.
- ‘ಸಾಮಾನ್ಯ’ ಎಂಬ ಆಯ್ಕೆಯನ್ನು ಕ್ಲಿಕ್ಕಿಸಿ.
- ನೀವು ಆ್ಯಂಡ್ರಾಯ್ಡ್ ಫೋನ್ ಬಳಸುತ್ತಿದ್ದರೆ, Show the Chat and Rooms tabs ಒತ್ತಿ. ಐಫೋನ್ ಅಥವಾ ಐಪ್ಯಾಡ್ ಬಳಸುತ್ತಿದ್ದರೆ ಇದೇ ಆಯ್ಕೆಯನ್ನು ಟಾಗಲ್ ಮಾಡಿ.
- ನೀವು ಐಫೋನ್ / ಐಪ್ಯಾಡ್ ಬಳಸುತ್ತಿದ್ದರೆ, ಚಾಟ್ ವೈಶಿಷ್ಟ್ಯವನ್ನು ಸಕ್ರಿಯಗೊಳಿಸಲು ಜಿಮೇಲ್ ಅನ್ನು ಮುಚ್ಚಬೇಕು ಮತ್ತು ಮತ್ತೆ ತೆರೆಯಬೇಕಾಗುತ್ತದೆ.
- ಇದಾದ ನಂತರ ಸ್ಕ್ರೀನ್ ಕೆಳಭಾಗದಲ್ಲಿ, ಕೇವಲ ಮೇಲ್ ಮತ್ತು ಮೀಟ್ ಐಕಾನ್‌ಗಳ ಬದಲಿಗೆ, ನೀವು ಈಗ ಚಾಟ್ ಮತ್ತು ರೂಮ್‌ಗಳ ಐಕಾನ್‌ಗಳನ್ನು ಸಹ ಹೊಂದಿರುತ್ತೀರಿ.
- ಬ್ರೌಸರ್‌ನಲ್ಲಿ ಚಾಟ್ ಸಕ್ರಿಯಗೊಳಿಸುವುದು ಹೇಗೆ?
- ನಿಮ್ಮ ಜಿಮೇಲ್ ಖಾತೆಯ ಸೆಟ್ಟಿಂಗ್ಸ್‌ಗೆ ಹೋಗಿ, ವ್ಯೂವ್ ಆಲ್ ಸೆಟ್ಟಿಂಗ್ಸ್ ಆಯ್ಕೆ ಮಾಡಿ. ನಂತರ ಮೇಲಿನ ಮೆನುವಿನಲ್ಲಿ, ‘ಚಾಟ್ ಮತ್ತು ಮೀಟ್’ ಆಯ್ಕೆಮಾಡಿ
- ‘ಚಾಟ್’, ‘ಕ್ಲಾಸಿಕ್ ಹ್ಯಾಂಗ್ ಔಟ್ಸ್’ ಮತ್ತು ‘ಆಫ್’ ಆಯ್ಕೆಗಳು ಲಭ್ಯ.
- ಸಾಮಾನ್ಯವಾಗಿ, ನಿಮ್ಮ ಜಿಮೇಲ್ ಪರದೆಯ ಎಡಭಾಗದಲ್ಲಿ ಚಾಟ್ ಕಾಣಿಸುತ್ತದೆ.
- ನಂತರ ‘ಚಾಟ್ ಮತ್ತು ಮೀಟ್’ ನಿಮಗೆ ಬೇಕಾದಲ್ಲಿ ಜಿಮೇಲ್‌ನಲ್ಲಿ ಮೀಟ್ ವಿಭಾಗವನ್ನು ಮರೆಮಾಡಲು ಅನುಮತಿಸುತ್ತದೆ. ಇದಾದ ನಂತರ ‘ಸೇವ್ ಚೇಂಜಸ್’ ಕ್ಲಿಕ್ ಮಾಡಿ ಈಗ ನಿಮ್ಮ ಜಿಮೇಲ್ ಪರದೆಯು ರಿಫ್ರೆಶ್ ಆಗುತ್ತದೆ.
- ನಿಮ್ಮ ಜಿಮೇಲ್ ಪರದೆಯ ಎಡಭಾಗದಲ್ಲಿರುವ ಮೀಟ್ ಮತ್ತು ಹ್ಯಾಂಗ್ ಔಟ್ಸ್ ಬಾಕ್ಸ್‌ಗಳ ಬದಲಿಗೆ, ನೀವು ಈಗ ಚಾಟ್ ಬಾಕ್ಸ್, ರೂಮ್ಸ್ ಬಾಕ್ಸ್ ಮತ್ತು ಮೀಟ್ ಬಾಕ್ಸ್ ಅನ್ನು ಹೊಂದಿರುತ್ತೀರಿ.

ಮೊಬೈಲ್‌ನಲ್ಲಿ ಚಾಟ್ ಐಕಾನ್ ಮೇಲೆ ಟ್ಯಾಪ್ ಮಾಡಿ ಮತ್ತು ನಂತರ ಕೆಳಗಿನ ಬಲ ಮೂಲೆಯಲ್ಲಿರುವ ಸಣ್ಣ ‘ನ್ಯೂ ಚಾಟ್’ ಪಾಪ್‌ಅಪ್‌ನಲ್ಲಿ ಟ್ಯಾಪ್ ಮಾಡಿ. ನಂತರ ನೀವು ಚಾಟ್ ಮಾಡಬಯಸುವ ವ್ಯಕ್ತಿಯ ಹೆಸರನ್ನು ಟೈಪ್ ಮಾಡಬಹುದು, ನೀವು ರೂಮ್ಸ್ ಅನ್ನು ರಚಿಸಬಹುದು ಅಥವಾ ಅಸ್ತಿತ್ವದಲ್ಲಿರುವ ರೂಮ್ಸ್ ಅನ್ನು ಬ್ರೌಸ್ ಮಾಡಬಹುದು.

ನೀವು ಗುಂಪು ಸಂಭಾಷಣೆಯನ್ನು ರಚಿಸಲು ಬಯಸಿದರೆ, ಬಯಸುವ ಮೊದಲ ವ್ಯಕ್ತಿಯ ಹೆಸರನ್ನು ಟೈಪ್ ಮಾಡಿ. ನೀವು ನಿಮ್ಮ ಚಾಟ್‌ಗೆ ಆಹ್ವಾನಿಸಲಾದ ಜನರು ಲಿಂಕ್‌ನೊಂದಿಗೆ ಇಮೇಲ್ ಅನ್ನು ಪಡೆಯುತ್ತಾರೆ, ಮತ್ತು ಸಂಭಾಷಣೆಗೆ ಸೇರಲು ಅಥವಾ ಅದನ್ನು ನಿರ್ಬಂಧಿಸುವ ಆಯ್ಕೆಯನ್ನು ಹೊಂದಿರುತ್ತಾರೆ. ■



॥ ಶ್ರೀ ಗುರು ಓಂ ಶ್ರೀ ಸದ್ಗುರು ಸಾಯಿರಾಂ ॥ ಭಾರತದ ಪ್ರಖ್ಯಾತ ಜ್ಯೋತಿಷ್ಯರು
ಬಿಳಿಗಿರಿ ರಂಗನಬೆಟ್ಟದಿಂದ ನೇರ ಪರಿಹಾರ.
ಓಂ ಶ್ರೀ ಸಾಯಿಕೊಡಂಗಲ್ಲೂರು ಭಗವತಿ ಜ್ಯೋತಿಷ್ಯರು
ಕೇರಳದ ಮಹಾಜ್ಞಾನಿ ದೈವಜ್ಞ । ಮಾತಾ ಕಾಳಿಕಾದೇವಿ ಆರಾಧಕರು

ಪಂಡಿತ್ ಶಕ್ತಿಪ್ರಸಾದ್ ಗುರೂಜಿ 9916774449
ನಿಮ್ಮ ಸಮಸ್ಯೆಗಳಾದ ಮಾಟ-ಮಂತ್ರ, ಶತ್ರುನಾಶ, ಸ್ತ್ರೀ-ಪುರುಷ ವಶೀಕರಣ, ಕೋರ್ಟ್‌ಕೇಸ್, ವ್ಯಾಪಾರದಲ್ಲಿ ತೊಂದರೆ, ಉದ್ಯೋಗ, ವಿದೇಶ ಪ್ರಯಾಣ, ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳದ ಶ್ರೀ ಆದಿ ದೈವಗಳಾದ, ಕೊಡಂಗಲ್ಲೂರು ಭಗವತಿ, ಮಾಂಡಂಗಾವ್ ಭಗವತಿ, ಚೋಟಾನಿಕೆರೆ ಭಗವತಿ, ಕಣತ್ತೂರ್ ನಾಲ್ವಾರ್ ದೈವಂ, ಶ್ರೀ ವಿಷ್ಣುಮಾಯೆ ಕುಟ್ಟಿಚಾತನ್ ತಪೋಶಕ್ತಿಯಿಂದ 2 ದಿನಗಳಲ್ಲಿ ಅಂತಿಮ ಪರಿಹಾರ ಮಾಡುತ್ತಾರೆ.
ಯಾವುದೇ ಹಳ್ಳಿ, ತಾಲ್ಲೂಕು, ಜಿಲ್ಲೆಗಳಿಂದ ಕರೆ ಮಾಡಿದರೆ ಫೋನಿನ ಮುಖಾಂತರ ಪರಿಹಾರ ತಿಳಿಸುತ್ತಾರೆ.
ಕೇರಳದ ಅಷ್ಟಮಂಗಲ ಪ್ರಶ್ನೆ, ಅರೋಢ ಪ್ರಶ್ನೆ, ತಾಂಬೂಲ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮ ದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಫೋನಿನ ಮೂಲಕ ತಿಳಿಸುತ್ತಾರೆ.
ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಗುಪ್ತವಾಗಿ ಇಡಲಾಗುವುದು.
Get your Any Problem 100% Solutions with in 2 Days.
ವಿ.ಸೂ.: ನಮ್ಮನ್ನು ಬಿಟ್ಟು ಬೇರೆ ಯಾರಾದರೂ ಪರಿಹಾರ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.